**ಕರ್ನಾಟಕ ಸರ್ಕಾರ**

ಸಂ.ಗ್ರಾಅಪ 83 ಗ್ರಾಪಂಅ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 15.06.2013

**ಸುತ್ತೋಲೆ**

**ವಿಷಯ:** ರಾಜ್ಯದ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ-9 ಮತ್ತು 11ನ್ನು ವಿತರಿಸುವ ಬಗ್ಗೆ.

**ಉಲ್ಲೇಖ:**
1. ನಿರ್ದೇಶಕರು , (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013 (ಭಾಗ-2) ದಿನಾಂಕ: 02.04.2013.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013, ದಿನಾಂಕ: 14-06-2013.

ರಾಜ್ಯದ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ-9 ಮತ್ತು 11ನ್ನು ಹೊರಡಿಸುವ ಸಂಬಂಧ ನಮೂನೆಗಳನ್ನು ಪರಿಷ್ಕರಿಸಿ ಕರ್ನಾಟಕ ಪಂ.ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ-28 ಮತ್ತು 30ಕ್ಕೆ ಸೂಕ್ತ ತಿದ್ದುಪಡಿ ತಂದು ಕರ್ನಾಟಕ ಪಂ.ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) (ತಿದ್ದುಪಡಿ) ನಿಯಮಗಳು, 2013ನ್ನು ದಿನಾಂಕ 14.06.2013 ರಂದು ಹೊರಡಿಸಲಾಗಿದೆ.

ಈ ನಮೂನೆಗಳನ್ನು ಆನ್-ಲೈನ್ ಮೂಲಕ ವಿತರಿಸುವ ಸಲುವಾಗಿ, ಇ-ಸ್ವತ್ತು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ತಂತ್ರಾಂಶದ ಅನುಷ್ಠಾನವನ್ನು ತಕ್ಷಣದಿಂದ ಕರ್ನಾಟಕದಾದ್ಯಂತ ಜಾರಿಗೊಳಿಸಲಾಗುತ್ತಿದೆ. ಆದುದರಿಂದ, ಈ ತಕ್ಷಣದಿಂದ ಜಾರಿಗೆ ಬರುವಂತೆ ಗ್ರಾಮ ಪಂಚಾಯತಿಗಳಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ-9 ಮತ್ತು 11ನ್ನು ಇ-ಸ್ವತ್ತು ತಂತ್ರಾಂಶದ ಮೂಲಕ ಮಾತ್ರ ವಿತರಿಸತಕ್ಕದ್ದಾಗಿದೆ. ಕೈಬರಹದ ಮುಖಾಂತರ ಹಾಗೂ ಹಳೆಯ ನಮೂನೆಯಲ್ಲಿ ನಮೂನೆ-9 ಮತ್ತು 11ನ್ನು ವಿತರಿಸುವ ಪದ್ಧತಿಯನ್ನು ಈ ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ.

ಈ ತಂತ್ರಾಂಶದಲ್ಲಿ ನಮೂನೆ 9ಎ ನ್ನು ದಾಖಲಿಸಲು ಮತ್ತು ನಮೂನೆ 9 ಮತ್ತು 11 ನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳ ಸಂಪೂರ್ಣ ವಿವರವನ್ನು ಉಲ್ಲೇಖ (1) ರಲ್ಲಿನ ಅರೆ ಸರ್ಕಾರಿ ಪತ್ರದ ಸಂಗಡ ಲಗತ್ತಿಸಿರುವ ಪ್ಲೋ ಚಾರ್ಟ್‌ನಲ್ಲಿ ವಿವರಿಸಲಾಗಿದೆ.

ಇ-ಸ್ವತ್ತು ತಂತ್ರಾಂಶದ ಬಳಕೆಗೆ ಸಂಬಂಧಪಟ್ಟಂತೆ ಈಗಾಗಲೇ ಎನ್.ಐ.ಸಿ. ಮುಖಾಂತರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪ ಕಾರ್ಯದರ್ಶಿಗಳು, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ತರಬೇತಿ ನೀಡಲಾಗಿದೆ.

ಈ ತಂತ್ರಾಂಶದ ಬಳಕೆಗಾಗಿ http://panchatantra.kar.nic.in ವೆಬ್‌ಸೈಟ್‌ನ ಮುಖಪುಟದಲ್ಲಿ ಲಿಂಕ್ ಕಲ್ಪಿಸಲಾಗಿದ್ದು, ಈ ಲಿಂಕ್‌ನ್ನು ಕ್ಲಿಕ್ ಮಾಡುವ ಮೂಲಕ ಇ-ಸ್ವತ್ತು ತಂತ್ರಾಂಶವನ್ನು ಪ್ರಾರಂಭಿಸಬಹುದು.

ಈ ಸಂಬಂಧ, ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಕೆಳಕಂಡಂತೆ ಕ್ರಮ ವಹಿಸುವಂತೆ ಸೂಚಿಸಿದೆ.

| ಕ್ರ. ಸಂ. | ಅವಧಿ | ಕಾರ್ಯ ಚಟುವಟಿಕೆ | ಸ್ಥಳ | ಗೊತ್ತು ಪಡಿಸಲಾದ ಅಧಿಕಾರಿ | ಇ-ಸ್ವತ್ತು ತಂತ್ರಾಂಶದ ಬಳಕೆಯ ವಿಧಾನ | ಹೆಚ್ಚುವರಿ ಮಾಹಿತಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ದಿನಾಂಕ 17.06.2013 ರಿಂದ 18.06.2013 ರವರೆಗೆ | ದ್ವಿತೀಯ ದರ್ಜೆ ಲೆಕ್ಕ ಸಹಾಯಕ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಬಯೋ ಮೆಟ್ರಿಕ್ ಬೆರಳಚ್ಚು ಗುರುತು ಸಂಗ್ರಹಣೆ ಮತ್ತು ಡಿಜಿಟಲ್ ಸಹಿ ಅಳವಡಿಸುವಿಕೆ | ತಾಲ್ಲೂಕು ಪಂಚಾಯತಿ ಕಾರ್ಯಾಲಯ | ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ | ಕಾರ್ಯ ನಿರ್ವಾಹಕ ಅಧಿಕಾರಿಯ ಲಾಗಿನ್‌ನಲ್ಲಿನ ಆಯ್ಕೆಗಳ ಪೈಕಿ "ಆಡಳಿತ" ವನ್ನು ಆಯ್ಕೆ ಮಾಡಿ ಈ ಪ್ರಕ್ರಿಯೆಯನ್ನು ನಿರ್ವಹಿಸುವುದು. | ಇ-ಸ್ವತ್ತು ತಂತ್ರಾಂಶವನ್ನು ಬಳಸುವ ಪೂರ್ವದಲ್ಲಿ ಬಯೋಮೆಟ್ರಿಕ್ ಬೆರಳಚ್ಚು ಗುರುತು ಸಂಗ್ರಹಣೆ ಕಡ್ಡಾಯ ವಾಗಿರುತ್ತದೆ. |
| 2. | ಕ್ರ.ಸಂ.1 ರ ಚಟುವಟಿಕೆ ಮುಗಿದ ತಕ್ಷಣದಿಂದ | ಸಾರ್ವಜನಿಕ ರಿಂದ ಅರ್ಜಿ ಸ್ವೀಕಾರ | ಗ್ರಾಮ ಪಂಚಾಯತಿ ಕಾರ್ಯಾಲಯ | ದ್ವಿತೀಯ ದರ್ಜೆ ಲೆಕ್ಕ ಸಹಾಯಕ | ತರಬೇತಿ ನೀಡಿದಂತೆ | ತಂತ್ರಾಂಶದ ಬಳಕೆ ಬಯೋಮೆಟ್ರಿಕ್ ಬೆರಳಚ್ಚು ಗುರುತಿನಿಂದ ಮಾತ್ರ |
| 3. | ಕ್ರ.ಸಂ.1 ರ ಚಟುವಟಿಕೆ ಮುಗಿದ ತಕ್ಷಣದಿಂದ | ಸ್ವೀಕರಿಸಿದ ಅರ್ಜಿಯ ಮೇಲೆ ಪ್ರಕ್ರಿಯೆ ಪ್ರಾರಂಭ | ಗ್ರಾಮ ಪಂಚಾಯತಿ ಕಾರ್ಯಾಲಯ | ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪಂಚಾಯ್ತಿ ಅಭಿವೃದ್ಧಿ | ತರಬೇತಿ ನೀಡಿದಂತೆ | ತಂತ್ರಾಂಶದ ಬಳಕೆ ಬಯೋಮೆಟ್ರಿಕ್ ಬೆರಳಚ್ಚು ಗುರುತಿನಿಂದ ಮಾತ್ರ, ಪಂಚಾಯತಿ |

| | | | | | | |
|---|---|---|---|---|---|---|
| | | | | ಅಧಿಕಾರಿ | | ಅಭಿವೃದ್ಧಿ ಅಧಿಕಾರಿಯು ನಮೂನೆ-9 ಮತ್ತು 11ರ ಅನುಮೋದನೆಯನ್ನು ಡಿಜಿಟಲ್ ಸಹಿ ಮೂಲಕ ಮಾತ್ರ ಮಾಡುವುದು. |
| 4. | ಕ್ರ.ಸಂ.1 ರ ಚಟುವಟಿಕೆ ಜೊತೆಯಲ್ಲಿಯೇ | ಕಾರ್ಯ ವಿಧಾನದ ಸಂರಚನೆ (configuration) | ತಾಲ್ಲೂಕು ಪಂಚಾಯತಿ ಕಾರ್ಯಾಲಯ | ಕಾರ್ಯ ನಿರ್ವಾಹಕ ಅಧಿಕಾರಿ | ತಂತ್ರಾಂಶದಲ್ಲಿ ಸಂಬಂಧಿಸಿದ ಸಿಬ್ಬಂದಿ ಹುದ್ದೆ ಖಾಲಿ ಇದ್ದಲ್ಲಿ, ಕಾರ್ಯ ನಿರ್ವಾಹಕ ಅಧಿಕಾರಿಯು ಕಾರ್ಯ ನಿರ್ವಹಣೆಗಾಗಿ ಈ ಕೆಳಕಂಡಂತೆ ಕ್ರಮ ವಹಿಸುವುದು:<br><br>1. ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆ ಖಾಲಿ ಇದ್ದಲ್ಲಿ, ತಂತ್ರಾಂಶದಲ್ಲಿ ಅವರ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಗ್ರಾಮ ಪಂಚಾಯತಿ ಕಾರ್ಯದರ್ಶಿಗೆ ವಹಿಸುವುದು.<br><br>2. ಗ್ರಾಮ ಪಂಚಾಯತಿ ಕಾರ್ಯದರ್ಶಿ ಹುದ್ದೆ ಖಾಲಿ ಇದ್ದಲ್ಲಿ, | ತಂತ್ರಾಂಶದ ಬಳಕೆ ಬಯೋಮೆಟ್ರಿಕ್ ಬೆರಳಚ್ಚು ಗುರುತಿನ ಮೂಲಕ ಮಾತ್ರ. |

| | | | | | | |
|---|---|---|---|---|---|---|
| | | | | | ತಂತ್ರಾಂಶದಲ್ಲಿ ಅವರ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ವಹಿಸುವುದು.<br><br>3. ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿ ಈ ಎರಡೂ ಹುದ್ದೆಗಳು ಖಾಲಿ ಇದ್ದಲ್ಲಿ ತಂತ್ರಾಂಶದಲ್ಲಿನ ಎಲ್ಲಾ ಕರ್ತವ್ಯಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಿರ್ವಹಿಸುವುದು. | |

ಸಾರ್ವಜನಿಕರ ಮಾಹಿತಿಗಾಗಿ ನಮೂನೆ-9 ಮತ್ತು 11ರ ವಿವರಗಳನ್ನು ಇ-ಸ್ವತ್ತು ತಂತ್ರಾಂಶದಲ್ಲಿ ಯಾವುದೇ ಲಾಗಿನ್ ಮತ್ತು ಪಾಸ್‌ವರ್ಡ್ ಬಳಸದೆಯೇ ನೇರವಾಗಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ. ಇ-ಸ್ವತ್ತು ತಂತ್ರಾಂಶವನ್ನು ಬಳಸಿ ಸೃಜಿಸಿರುವ ನಮೂನೆ-9 ಮತ್ತು 11ನ್ನು ಮಾತ್ರ ಸಾರ್ವಜನಿಕರು ಇಲ್ಲಿ ವೀಕ್ಷಿಸಬಹುದು.

ತಂತ್ರಾಂಶದ ಅನುಷ್ಠಾನದಲ್ಲಿ ತಾಂತ್ರಿಕ ಸಲಹೆ ಮತ್ತು ಸಹಾಯಕ್ಕಾಗಿ ಜಿಲ್ಲಾ ಸೂಚನಾ ವಿಜ್ಞಾನಾಧಿಕಾರಿ (ಡಿ.ಐ.ಒ) ರವರನ್ನು ಸಂಪರ್ಕಿಸುವುದು ಮತ್ತು ಸದರಿ ಅಧಿಕಾರಿಗಳಿಗೆ ಈ ತಂತ್ರಾಂಶದ ಅನುಷ್ಠಾನಕ್ಕೆ ಬೇಕಾದ ಎಲ್ಲಾ ನೆರವು ಒದಗಿಸುವಂತೆ ರಾಜ್ಯ ಸೂಚನಾ ವಿಜ್ಞಾನಾಧಿಕಾರಿಗಳು, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ ರವರು ಈಗಾಗಲೇ ಸೂಚಿಸಿರುತ್ತಾರೆ.

ಈ ತಂತ್ರಾಂಶದ ಉಪಯೋಗದಲ್ಲಿನ ಯಾವುದೇ ಅಡಚಣೆಗಳ ನೆಪದಿಂದ ಕಾರ್ಯಕ್ರಮದ ಯಶಸ್ವಿ ಅನುಷ್ಠಾನದಲ್ಲಿ ಅಡ್ಡಿಯಾಗದಂತೆ ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳದ್ದಾಗಿರುತ್ತದೆ. ಇದಲ್ಲದೆ, ಈ ತಂತ್ರಾಂಶದ

ಅನುಷ್ಠಾನದ ಹಿನ್ನೆಲೆಯಲ್ಲಿ, ಸಾರ್ವಜನಿಕರಿಗೆ ಯಾವುದೇ ರೀತಿಯ ಸೌಲಭ್ಯದಿಂದ ವಂಚಿತರಾಗದಂತೆ ಕ್ರಮ ವಹಿಸತಕ್ಕದ್ದು.

ಮೇಲಿನ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಇ-ಸ್ವತ್ತು ತಂತ್ರಾಂಶದ ಯಶಸ್ವಿ ಅನುಷ್ಠಾನಕ್ಕೆ ಎಲ್ಲಾ ರೀತಿಯ ಕ್ರಮ ವಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

**(ಮಾರ್ಗರೇಟ್ ಲೀನಾ ನರೋನ್ಹ)**
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು/ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು
4. ವೆಬ್‌ಸೈಟ್/ಕರ್ನಾಟಕ ವಿಕಾಸ
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಮಾನ್ಯ ಗ್ರಾ.ಅ&ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ/ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಶಾಖೆ.
3. ಕಾರ್ಯದರ್ಶಿಗಳು (ಪಂ.ರಾಜ್) ಇವರ ಆಪ್ತ ಶಾಖೆ, ಗ್ರಾ.ಅ&ಪಂ.ರಾಜ್ ಇಲಾಖೆ.